1	2	3	4	5
3.	ಸ್ಲಾಟರ್ ಹೌಸ್		11.80	7.50
4.	ಸಿಹಿ ನೀರು ಕೊಳ		5.30	2.40
5.	ನಳಬಂಧವಾಡಿ		15.20	1.90
6.	ಸರ್ವೆ 620 ಶುಗರ್ ಟೌನ್		30.60	16.00
7.	ಪೂರ್ವ ಭಾಗದ ರೈಲ್ವೆ ಗೇಟ್ ಹತ್ತಿರ	ಯು.ಜಿ.ಡಿ., ಚರಂಡಿ, ಚಪ್ಪಡಿ	9.50	10.80
8.	ವೇಣು ಗೋಪಾಲ ಶಿಶು ವಿಹಾರ	ನೆಲಹಾಸು, ಜಲ್ಲಿ ರಸ್ತೆ, ನೀರು	6.40	0.00
9.	ಗುತ್ತಲು ಹರಿಜನ ಕಾಲೋನಿ	ಸರಬರಾಜು, ಬೀದಿದೀಪ ಕಸದ	31.00	6.30
10.	ಪಿ.ಕೆ. ಕಾಲೋನಿ	ತೊಟ್ಟಿ, ಅಡ್ಡಮೋರಿ, ಸಮುದಾಯ	6.80	0.00
11.	ಸ್ವತಂತ್ರ ಪಾಳ್ಯ	ಭವನ	10.90	1.00
12.	ಜಯರಾಮ್ ಲೇಔಟ್		5.50	1.90
13.	ಹೊಸಹಳ್ಳಿ ಗುರುಮಠ		8.53	1.60
	ಒಟ್ಟು		182.23	65.65

ಸೇಡಂ ನಗರದ ಪದವಿ ಮಹಾವಿದ್ಯಾಲಯಕ್ಕೆ ಪೀಠೋಪಕರಣಗಳ ವ್ಯವಸ್ಥೆ

114 (497) : ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ, (ಸೇಡಂ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲಬರ್ಗ ಜಿಲ್ಲೆಯ ಸೇಡಂ ನಗರದ ಪದವಿ ಮಹಾವಿದ್ಯಾಲಯದ ಪೀಠೋಪಕರಣಗಳಿಗಾಗಿ ಏನಾದರೂ ಹಣ ಸರ್ಕಾರದ ವತಿಯಿಂದ ಮಂಜೂರಾಗಿದೆಯೇ;

ಆ) ಮಂಜೂರಾಗದಿದ್ದಲ್ಲಿ ಈ ಪೀಠೋಪಕರಣಗಳನ್ನು ತರಿಸಲಾಗಿದೆಯೇ; ಇಲ್ಲವೆಂದರೆ ವಿವರ ನೀಡುವುದು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಆಗಿದೆ.

ಆ) ರೂ. 15000/– ಗಳನ್ನು ತರಗತಿ ಪೀಠೋಪಕರಣ ಖರೀದಿಗಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂಗೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಸದರಿ ಕಾಲೇಜಿನ ಪ್ರಾಂಶುಪಾಲರು ಈ ಅನುದಾನದಲ್ಲಿ ತರಗತಿ ಪೀಠೋಪಕರಣಗಳನ್ನು ಖರೀದಿಸಿರುತ್ತಾರೆ.

ಕಲಾವಿದರಿಗೆ ಮಾಶಾಸನ ನೀಡಿಕೆ

116 (500) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರ ಕಲಾವಿದರಿಗೆ ಮಾಸಾಶನ ನೀಡುತ್ತಿರುವುದು ನಿಜವೇ; ಪ್ರತಿ ಕಲಾವಿದರಿಗೆ ನೀಡುತ್ತಿರುವ ಮಾಸಾಶನ ಎಷ್ಟು;

ಆ) ಎಷ್ಟು ಜನ ಕಲಾವಿದರಿಗೆ ಮಾಸಾಶನ ನೀಡಲಾಗುತ್ತಿದೆ;

ಇ) ಮಾಸಾಶನ ಹೆಚ್ಚಳ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ; ಎಷ್ಟು ಹೆಚ್ಚಳ ಮಾಡಲಾಗುವುದು; ಯಾವಾಗಿನಿಂದ ಅನ್ವಯಿಸುವಂತೆ ಹೆಚ್ಚಳ ಮಾಡಲಾಗುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಹೌದು ಮಾಸಿಕ ರೂ. 500/– ನೀಡಲಾಗುತ್ತಿದೆ.

ಆ) 9875 ಜನ ಕಲಾವಿದರಿಗೆ ಮಾಸಾಶನ ನೀಡಲಾಗುತ್ತಿದೆ.

ಇ) ಇಲ್ಲ.

ರಾಜ್ಯದಲ್ಲಿನ ಅನುದಾನ ರಹಿತ ಖಾಸಗಿ ಶಾಲೆಗಳಿಗೆ ಅನುದಾನ ನೀಡಿಕೆ

118 (502) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅನುದಾನ ರಹಿತ ಖಾಸಗಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು : (ಜಿಲ್ಲಾವಾರು ವಿವರ ನೀಡುವುದು) ;

ಆ) ಈ ಶಾಲೆಗಳಿಗೆ ಅನುದಾನ ಯಾವಾಗ ನೀಡಲಾಗುವುದು, ಈ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಖಾಸಗಿ ಅನುದಾನ ರಹಿತ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಪ್ರೋ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಸಂಖ್ಯೆ 5552 ಅನುದಾನ ರಹಿತ ಪ್ರೌಢಶಾಲೆಗಳ ಸಂಖ್ಯೆ 4049 (ಜಿಲ್ಲಾವಾರು ವಿವರ ಲಗತ್ತಿಸಿದೆ)

ಆ) ದಿ: 01.06.1987 ರಂದು ಹಾಗೂ ನಂತರ ಪ್ರಾರಂಭಿಸಲಾದ ಖಾಸಗಿ ಪ್ರಾಥಮಿಕ / ಪ್ರೌಢ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಸೇರಿದ ಸಂಸ್ಥೆಗಳ ವತಿಯಿಂದ ಪ್ರಾರಂಭಿಸಿದ ಶಾಲೆಗಳಿಗೆ ಸಂಬಂಧಿಸಿದಂತೆ ವೇತನಾನುದಾನಕ್ಕೆ ಒಳಪಡಿಸಲು ಪರಿಗಣಿಸಲು ದಿ: 31.03.1992 ಕಟ್ ಆಫ್ ದಿನಾಂಕವಾಗಿದೆ)

ಇ) ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಆಯಾ ಶಾಲೆಗಳ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಅನುದಾನ ರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿವರ

ಕ್ರ.ಸಂ.	ಜಿಲ್ಲೆ	ಪ್ರಾಥಮಿಕ ಶಾಲೆಗಳ ಸಂಖ್ಯೆ	ಪ್ರೌಢ ಶಾಲೆಗಳ ಸಂಖ್ಯೆ
1	2	3	4
1.	ಬೆಂಗಳೂರು ದಕ್ಷಿಣ	536	516
2.	ಬೆಂಗಳೂರು ಉತ್ತರ	362	439
3.	ಬೆಂಗಳೂರು ಗ್ರಾಮಾಂತರ	171	168
4.	ಚಿತ್ರದುರ್ಗ	146	169
5.	ದಾವಣಗೆರೆ	162	57
6.	ಶಿವಮೊಗ್ಗ	223	125
7.	ಕೋಲಾರ	187	194